ಎಂ ಸಿ ನಂ.8/2025
ಪಿ.ಡಬ್ಲ್ಯೂ-3 ಬಸಲಿಂಗಪ್ಪ ತಂದೆ ಮಲಕಪ್ಪ ಹತ್ತರಕಿ

**(ಇಂದು ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ</u>.

ಅರ್ಜಿದಾರ ಶಿವಶರಣ ನಮ್ಮ ಊರಿನವರಾಗಿರುತ್ತಾರೆ. ಎದುರುದಾರರಾದ ಚೆನ್ನಮ್ಮ ನನಗೆ ಗೊತ್ತು. ಮದುವೆಯಾದ ನಂತರ ೨-೩ ತಿಂಗಳು ಶಿವಶರಣರವರು ತಮ್ಮ ತಂದೆ-ತಾಯಿಯ ಜೊತೆಗೆ ಇದ್ದರು. ನಾನು ಹೊಸ ಊರಿನಲ್ಲಿ ಇರುತ್ತೇನೆ. ಶಿವಶರಣ ಮತ್ತು ಚೆನ್ನಮ್ಮರವರು ಹೊಸ ಊರಿನಲ್ಲಿ ೨ ಪ್ಲಾಟ್ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವಶರಣರವರ ತಂದೆ ಬಾಬುರಾಯರವರು ತಮ್ಮ ಹಿರಿಯರ ಜಮೀನು ಮಾರಾಟ ಮಾಡಿ, ಗೋಳಸಾರ ಗ್ರಾಮದಲ್ಲಿ ಜಮೀನು ಖರೀದಿಸಿರುತ್ತಾರೆ ಎಂದರೆ ಸರಿ. ಚೆನ್ನಮ್ಮ ಮತ್ತು ಶಿವಶರಣರವರು ೨-೩ ವರ್ಷ ಚೆನ್ನಾಗಿಯೆ ಇದ್ದರು. ನಂತರ ಜಗಳ ಮಾಡಿಕೊಂಡು ೪-೫ ವರ್ಷ ಕೂಡಿ ಇದ್ದರು. ಚೆನ್ನಮ್ಮ ಮತ್ತು ಶಿವಶರಣರವರು ಸುಮಾರು ೮-೧೦ ವರ್ಷಗಳಿಂದ ಬೇರೆ-ಬೇರೆಯಾಗಿ ವಾಸ ಇರುತ್ತಾರೆ. ಶಿವಶರಣರವರು ಇಂಡಿ ನ್ಯಾಯಾಲಯದಲ್ಲಿ ಕೇಸು ಹಾಕಿರುತ್ತಾರೆ ಎಂದು ಕೇಳಿರುತ್ತೇನೆ, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚೆನ್ನಮ್ಮರವರು ಇಂಡಿ ನ್ಯಾಯಾಲಯದಲ್ಲಿ ಪಾಲು ಕೇಳಿ ತನ್ನ ಮಕ್ಕಳ ಪರವಾಗಿ ಕೇಸು ಹಾಕಿದ ವಿಚಾರ ನನಗೆ ಗೊತ್ತಿಲ್ಲ.

೨. ನಾನು ೩-೪ ಬಾರಿ ಚೆನ್ನಮ್ಮರವರ ಊರಿಗೆ ಪಂಚಾಯಿತಿ ಮಾಡಲು ಹೋಗಿದ್ದೆ. ಸದರಿ ಪಂಚಾಯಿತಿಗೆ ಚೆನ್ನಮ್ಮರವರ ಊರಿನವರನ್ನು ಕರೆದರೂ ಕೂಡಾ ಯಾರು ಬಂದಿರುವುದಿಲ್ಲ. ಚೆನ್ನಮ್ಮರವರ ತಮ್ಮ ಮತ್ತು ತಮ್ಮ ಮಕ್ಕಳ ಜೀವನಾಂಶಕ್ಕಾಗಿ ಕೇಸು

ಹಾಕಿದ ವಿಚಾರ ನನಗೆ ಗೊತ್ತಿರುವುದಿಲ್ಲ. ಶಿವಶರಣ ಚಾಲಕನಾಗಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಕೂಲಿ ಕೆಲಸ ಮಾಡುತ್ತಾನೆ ಎನ್ನುತ್ತಾರೆ. ಅರ್ಜಿದಾರ ಶಿವಶರಣರವರಿಗೆ ಚಾಲಕನಾಗಿ ಕೆಲಸ ಮಾಡುವುದರಿಂದ ಮತ್ತು ಜಮೀನಿನಿಂದ ವರ್ಷಕ್ಕೆ ೮-೧೦ ಲಕ್ಷ ರೂಪಾಯಿ ಆದಾಯ ಇದೆ ಎಂದರೆ ಸರಿಯಲ್ಲ. ನಾನು ಚೆನ್ನಮ್ಮರವರ ಊರಿಗೆ ಪಂಚಾಯಿತಿ ಮಾಡಲು ಹೋಗಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಶರಣ ಚಾಲಕನಾಗಿ ಕೆಲಸ ಮಾಡುತ್ತಿದ್ದ ವಿಚಾರ ಗೊತ್ತಿದ್ದರೂ ನಾನು ಶಿವಶರಣನ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಶರಣ ಮತ್ತು ಅವರ ತಂದೆ ಬಾಬುರಾಯರವರು ನಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.